## ಸೂಫೀ ಸಂಪ್ರದಾಯ



# ಕರ್ನಾಟಕದ ಸೂಫೀ ಪರಂಪರೆ ಮತ್ತು ದರ್ಶನ

ಡಾ. ಅಬ್ದುಲ್ ಹಮೀದ್

(ಸೂಫೀ ಸಂತರ ಕಥೆಯೊಂದನ್ನು ಆಧರಿಸಿದ ಚಿತ್ರ)

**ಕರ್ನಾಟಕದ ಆಧ್ಯಾತ್ಮಿಕ ಸರೋವರಕ್ಕೆ ಸೂಫೀ ಸಂಪ್ರದಾಯದ ಸುಜಲಧಾರೆ ಹರಿದುಬಂದ ಸಂಗತಿ ಸೋಜಿಗವನ್ನು ತರುವಂಥದ್ದು. ಅದರ ಐತಿಹಾಸಿಕ ಮಜಲುಗಳನ್ನು ನಮಗೆ ತೆರೆದಿಟ್ಟ ಮಾನ್ಯ ಲೇಖಕರು ಸೂಫೀಗಳ ಬಗ್ಗೆ ವಿಶೇಷವಾಗಿ ಸಂಶೋಧಿಸಿದವರು. ನಿವೃತ್ತ ಕನ್ನಡ ಉಪನ್ಯಾಸಕರಾದ ಇವರು ಉತ್ತಮ ಬರಹಗಾರರು.**

### ಸೂಫೀ ನೆರೆ

**ಜ**ಗತ್ತಿನ ಇತಿಹಾಸದಲ್ಲಿ ಅನೇಕ ಧರ್ಮ, ಸಂಸ್ಕೃತಿ, ದರ್ಶನಗಳು ಹುಟ್ಟಿ ಮಾನವನನ್ನು ಸನ್ಮಾರ್ಗಕ್ಕೆ ತರಲು ಶ್ರಮಿಸುತ್ತಿರುವುದನ್ನು ನಾವು ಕಂಡಿದ್ದೇವೆ. ಹಿಂದೂ, ಶೈವ, ವೀರಶೈವ, ಜೈನ, ವೈಷ್ಣವ ಮತ್ತು ಬೌದ್ಧ ಧರ್ಮಗಳು ಭಾರತದ **ಹೆಮೆಟಿಕ್** ಭಾಷಾಪರಿವಾರಕ್ಕೆ ಸೇರಿದವುಗಳಾದರೆ, ಅರಬ್, ಈಜಿಪ್ಟ್, ಮತ್ತು ಗ್ರೀಸ್ ಭೂಭಾಗಗಳಲ್ಲಿನ ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು **ಸೆಮೆಟಿಕ್** ಭಾಷಾಪರಿವಾರಕ್ಕೆ ಸೇರಿವೆ. ಈ ಧರ್ಮಗಳು ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿ ಪಸರಿಸಿರುವುದು ಸರ್ವವಿದಿತ. ಇವುಗಳಲ್ಲಿ ಇಸ್ಲಾಂಧರ್ಮವು ಪ್ರಪಂಚದ ಎಲ್ಲ ಕಡೆಗಳಲ್ಲೂ ಕಂಡುಬರುವುದು ಹಾಗೂ ಏಕರೂಪವನ್ನು ಪಡೆದಿರುವುದು ಅದರ ವಿಶೇಷತೆ.

ಇಸ್ಲಾಂ ಧರ್ಮದ ಜನ್ಮ ಕ್ರಿ.ಶ. ಆರನೇ (೫೭೦) ಶತಮಾನದಲ್ಲಿ ಅರಬ್ ದೇಶದ ಮೆಕ್ಕಾ ನಗರದಲ್ಲಿ ಆಯಿತು. ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರರು ಇದರ ಸಂಸ್ಥಾಪಕರು. ಸೂಫೀಗಳು ಈ ಧರ್ಮದ ಒಂದು ತಾತ್ವಿಕ ಶಾಖೆಯಾಗಿ ಹೊರಹೊಮ್ಮಿದ್ದಾರೆ. ಇವರದು ಇಸ್ಲಾಂ ಧರ್ಮದ ಮೂಲ ತತ್ತ್ವಗಳಿಗೆ ಬದ್ಧರಾಗಿದ್ದುಕೊಂಡು, ತಮ್ಮದೇ ಆದ ಕೆಲವು ವಿಶ್ವಾಸ, ನೀತಿ, ನಿಯಮಗಳನ್ನು ರೂಪಿಸಿಕೊಂಡು ಬೆಳೆದಿರುವ ಒಂದು ದ್ವೈತಾದ್ವೈತಪಂಥವಾಗಿದೆ.

### ಭಾರತಕ್ಕೆ ಸೂಫೀಗಳ ಆಗಮನ

ಸೂಫೀ ಸಂತರು ಭಾರತ ದೇಶದವರಲ್ಲ. ಇವರು ಅರಬ್ ಪ್ರದೇಶಗಳಿಂದ ಇಸ್ಲಾಂ ಧರ್ಮದ ಸಂದೇಶವನ್ನು ಹೊತ್ತು ಜಗತ್ತಿನೆಲ್ಲೆಡೆ ಪ್ರಸಾರ ಮಾಡಲು ಜೀವದ ಹಂಗು ತೊರೆದು ಹೊರಟವರು. ಇವರನ್ನು **'ಇಸ್ಲಾಮೀ ಋಷಿ'** ಗಳೆಂದೂ ಕರೆಯುತ್ತಾರೆ. ಇಸ್ಲಾಂ ಧರ್ಮವು ಹುಟ್ಟುವುದಕ್ಕಿಂತ ಮೊದಲೇ ಇವರ ಪ್ರಾಚೀನ ಪರಂಪರೆ ಇತ್ತೆಂದು ತಿಳಿದುಬರುತ್ತದೆ. ಸಾವಿರಾರು ವರ್ಷಗಳಿಂದ ಇರುತ್ತಿದ್ದ ಈ ಏಕೇಶ್ವರವಾದಿ ಸಂನ್ಯಾಸಿಗಳಲ್ಲಿ ಯಾವುದೇ ಒಂದು ನಿರ್ದಿಷ್ಟ ಸಂಪ್ರದಾಯವಾಗಲಿ, ಸಾಧನಾ ಪಥದ ಸಿದ್ಧಾಂತವಾಗಲಿ, ಮತವಾಗಲಿ ಇರಲಿಲ್ಲ.

ಹಿಜಿರಾ ಶಕೆಯ ಆರಂಭಕಾಲದಲ್ಲಿ, ಅಂದರೆ ಕ್ರಿ.ಶ. ೬೧೪ ರಲ್ಲಿ ಮೆಕ್ಕಾ ಮತ್ತು ಮದೀನಾ ನಗರಗಳ ಸುತ್ತಮುತ್ತ ಅಲೆದಾಡುತ್ತಿದ್ದ ದರ್ವೇಶ್ (ಫಕೀರ್) ಸಂನ್ಯಾಸಿಗಳು ಹೊಸದಾದ ಇಸ್ಲಾಂ ಧರ್ಮವನ್ನು ಮುಕ್ತಕಂಠದಿಂದ ಸ್ವಾಗತಿಸಿದರು. ಏಕೆಂದರೆ ಇಸ್ಲಾಂ ಏಕದೇವೋಪಾಸಕ ಧರ್ಮವಾಗಿ ಉದಯಿಸಿತ್ತು. ಇದಕ್ಕಿಂತ ಮೊದಲು ಆ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಯಹೂದಿ,

ಕ್ರೈಸ್ತ ಧರ್ಮಗಳಿಂದ ಆ ದರ್ವೇಶರು ಬೇಸತ್ತಿದ್ದರು. ಇಂತಹ ಒಂದು ವಿಚಿತ್ರ ಸಂನ್ಯಾಸಿ ಗುಂಪುಗಳಿಗೆ, ಇಸ್ಲಾಂನ ಶಕ್ತಿಶಾಲಿ, ದಯಾಳು ಜಗದ್ವ್ಯಾಪಕ 'ಅಲ್ಲಾಹ್'ನ ಭಗವದ್‌ಪ್ರೇಮೋಪಾಸನಾ ಮಾರ್ಗವು ಚೆನ್ನಾಗಿ ಹಿಡಿಸಿತು. ರಹಸ್ಯವಾದ ಪ್ರೇಮಮಾರ್ಗಕ್ಕೆ ನಾಂದಿ ಹಾಡುತ್ತಾ, ಜಗತ್ತಿನ ಸರ್ವರಲ್ಲೂ ಪ್ರೇಮವನ್ನು ಬಿತ್ತುತ್ತಾ ಹೊರಟವರೇ ಸೂಫೀಗಳು. ಇವರು ಭಾರತಕ್ಕೆ ಮೊಟ್ಟಮೊದಲು ಕ್ರಿ.ಶ. ೬೩೬ ರಲ್ಲಿ ಕಾಲಿಟ್ಟರು.

ಯಾವ ಕಾಲದಲ್ಲಿ ಸೂಫೀ ಮತವು ಒಂದು ಸ್ವರೂಪವನ್ನು ತಾಳಲಾರಂಭಿಸಿತ್ತೋ ಆ ಕಾಲಕ್ಕಾಗಲೇ ಭಾರತ–ಅರಬ್ ದೇಶಗಳ ಮಧ್ಯೆ ಅತ್ಯಧಿಕ ಪ್ರಮಾಣದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವಿಚಾರವಿನಿಮಯಗಳು ನಡೆಯುತ್ತಿದ್ದುವು. ಅಂದರೆ ಅನೇಕ ವೇಳೆ ಮುಸ್ಲಿಂ ದರ್ವೇಶರೂ, ಹಿಂದೂ ಯೋಗಿಗಳೂ ಪರಸ್ಪರ ಭೇಟಿಯಾಗಿ ತಮ್ಮ ತಮ್ಮ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚಿಸಿ ವಿನಿಮಯ ಮಾಡಿಕೊಳ್ಳುತ್ತಿದ್ದರು. ಅರಬ್ಬರೂ ಕೂಡ ಭಾರತೀಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಮತ್ತು ಸಾಧನಾ ಪದ್ಧತಿಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತಳೆದಿದ್ದರು. ಅರಬ್ಬರೊಂದಿಗೆ ಬೌದ್ಧ ಸಂನ್ಯಾಸಿಗಳ ಸಂಪರ್ಕವೂ ಬಹಳ ಮೊದಲೇ ಆಗಿದ್ದಿತು. ಇವೆಲ್ಲದರ ಪ್ರಭಾವ, ಪರಿಣಾಮಗಳನ್ನು ಸೂಫೀ ಪಂಥದಲ್ಲಿ ಇಂದೂ ನಾವು ಕಾಣಬಹುದಾಗಿದೆ. ಇರಾಕ್ ದೇಶದ ಬಾಸ್ರಾ ನಗರವು ಸೂಫೀ ಮತಕ್ಕೆ ಪ್ರಧಾನ ಕೇಂದ್ರವೆನಿಸಿದೆ. ಇರಾನ್ ದೇಶವೂ ಸಹ ಬಹಳ ಪ್ರಾಚೀನ ಕಾಲದಿಂದಲೂ ಆರ್ಯ ಸಂಸ್ಕೃತಿಯ ಕೇಂದ್ರವಾಗಿದ್ದು, ಸೂಫೀ ಸಂಸ್ಕೃತಿಯ ಬೆಳವಣಿಗೆಯಲ್ಲಿ ಇದರ ಕೊಡುಗೆಯಿದೆ ಎಂಬುದರಲ್ಲಿ ಸಂಶಯವಿಲ್ಲ.

### 'ಸೂಫೀ' ಶಬ್ದದ ವ್ಯುತ್ಪತ್ತಿ

'ಸೂಫೀ' ಶಬ್ದವು ಇಸ್ಲಾಂ ಧರ್ಮಗ್ರಂಥವಾದ ಖುರಾನ್‌ನಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. ಇಸ್ಲಾಂ ಹುಟ್ಟುವುದಕ್ಕೆ ಮೊದಲೂ ಕೂಡ ಸೂಫಿಗಳಂತಹ ಸಂನ್ಯಾಸಿಗಳು 'ದರ್ವೇಶ್', 'ಅವ್‌ಲಿಯಾ' ಮತ್ತು 'ಫಕೀರ್' ಎಂಬ ಹೆಸರುಗಳಲ್ಲಿ ಅರಬ್ ಪ್ರದೇಶಗಳಲ್ಲಿ ಅಲೆದಾಡಿಕೊಂಡಿದ್ದರು. ಇವರು ಸೂಫೀಗಳೆಂದು ಕರೆಯಿಸಿಕೊಂಡಿದ್ದು, ಇಸ್ಲಾಂ ಧರ್ಮವು ಹುಟ್ಟಿದ ಇನ್ನೂರು ವರ್ಷಗಳ ಅನಂತರದಲ್ಲಿ ಎಂಬುದನ್ನು ನಾವು ಗಮನಿಸಬೇಕು. ಖುರಾನ್‌ನಲ್ಲಿ 'ಅವ್‌ಲಿಯಾ' ಶಬ್ದವು ಅನೇಕ ಕಡೆ ಬಂದಿದೆ. ಈ 'ಅವ್‌ಲಿಯಾ'ಗಳು ಅಲ್ಲಾಹ್‌ನ ಅತಿ ಹತ್ತಿರದವರೆಂದು ಉಲ್ಲೇಖವಿದೆ. ಇಸ್ಲಾಂ ಧರ್ಮವು ಹುಟ್ಟಿದ ಇನ್ನೂರು ವರ್ಷಗಳ ಹೊತ್ತಿಗೆ ಈ ಸೂಫೀ–ಅವ್‌ಲಿಯಾಗಳಲ್ಲಿ ತಾತ್ವಿಕ ವಿಚಾರಗಳಲ್ಲಿ ಸಾಕಷ್ಟು ಪರಿವರ್ತನೆಗಳು ಉಂಟಾಗಿ ಅನೇಕ ಪಂಗಡಗಳು ಸೃಷ್ಟಿಯಾದುವು. ನಂತರದಲ್ಲಿ ಇವರನ್ನು ಸೂಫೀ ಸಂತರೆಂದು ಕರೆಯಲಾಯಿತು. ಈ ಸೂಫೀ ಸಂತರನ್ನು 'ಮಿಶ್ರ ಸಂಪ್ರದಾಯಿ' ಗಳೆಂದೂ, ಇವರಿಗಿಂತ ಹಿಂದಿನ ಅವ್‌ಲಿಯಾಗಳನ್ನು 'ಶುದ್ಧ ಸಂಪ್ರದಾಯಿ' ಗಳೆಂದೂ ಕರೆಯುತ್ತಾರೆ.

**ಅನೇಕ ವಿದ್ವಾಂಸರು ಸೂಫೀ ಶಬ್ದದ ಉತ್ಪತ್ತಿಯನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಹಜರತ್ ಅಲಿ ಹುಜ್ವೇರಿ ಕಾಶ್ಮೀರಿಯವರು. ಇವರ ಗ್ರಂಥ 'ಕಶ್ಫುಲ್ ಮಹಜೂಬ್'ನಲ್ಲಿ 'ಸಫಾ' ಎಂಬ ಶಬ್ದದಿಂದ 'ಸೂಫೀ' ಶಬ್ದವು ಹುಟ್ಟಿದೆಯೆಂದೂ ಸಫಾ ಎಂದರೆ ಪವಿತ್ರ–ಸ್ವಚ್ಛವಾದ ಜನರಿಂದ ಪ್ರಾರಂಭವಾದ ಪಂಥವೆಂದೂ ಅಭಿಪ್ರಾಯಪಟ್ಟಿದ್ದಾರೆ. ಡಾ. ಅಹಮದ್ ಹುಸೇನರು ಮದರಾಸ್ ವಿಶ್ವವಿದ್ಯಾಲಯದ ವಿಚಾರಸಂಕಿರಣವೊಂದರಲ್ಲಿ ಪ್ರಬಂಧವೊಂದನ್ನು ಮಂಡಿಸುತ್ತಾ, ಸೂಫೀ ಶಬ್ದವು ಅರಬ್ಬೀ ಭಾಷೆಗೆ ಸಂಬಂಧಿಸಿದ್ದು; 'ಸೂಫ್' (ಉಣ್ಣೆ) ಎಂಬ ಮೂಲ ಶಬ್ದದಿಂದ ಉತ್ಪತ್ತಿಯಾಗಿದೆ; ಯಾವ ಫಕೀರರು ಉಣ್ಣೆಯ ಕಪ್ಪುಬಣ್ಣದ ಉದ್ದವಾದ ನಿಲುವಂಗಿಗಳನ್ನು ಧರಿಸಿಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುತ್ತಾ, ಇಸ್ಲಾಂ ಧರ್ಮದ ಪ್ರಚಾರವನ್ನು ಮಾಡುತ್ತಿದ್ದರೋ ಅವರೇ ಸೂಫೀಗಳು ಎಂದಿದ್ದಾರೆ.**

### ಕರ್ನಾಟಕಕ್ಕೆ ಸೂಫೀಗಳ ಆಗಮನ

ಇಸ್ಲಾಂ ಧರ್ಮವು ಭಾರತಕ್ಕೆ ಮೊಟ್ಟಮೊದಲು ಪಶ್ಚಿಮದ ಅರಬ್ಬೀ ಸಮುದ್ರದ ಮಾರ್ಗವಾಗಿ ಕ್ರಿ.ಶ. ೬೩೬ ರಲ್ಲಿ ಕಾಲಿಟ್ಟಿತು. ಕೇರಳದ ಮಲಬಾರ್ ತೀರಪ್ರದೇಶದಲ್ಲಿ ಆಳುತ್ತಿದ್ದ ರಾಜ ಚೇರ್‌ಮಾನ್ ಪೆರುಮಾಳನ ಆಸ್ಥಾನಕ್ಕೆ ಸೂಫೀ ಸಂತರು ಬಂದರು. ರಾಜನು ಇವರ ಹೊಸ ಧರ್ಮದ ವಿಚಾರಗಳಿಂದ ಪ್ರಭಾವಿತನಾಗಿ ಮೊಟ್ಟಮೊದಲು ಇಸ್ಲಾಂ ಧರ್ಮವನ್ನು ಸ್ವೀಕರಿಸಿ, ತನ್ನ ರಾಜ್ಯದಲ್ಲಿ ನಿರ್ಭಯವಾಗಿ ಧರ್ಮಪ್ರಚಾರವನ್ನು ಮಾಡಲು, ಅನುಮತಿಯನ್ನು ಕೊಟ್ಟನು. ಆ ತಂಡದಲ್ಲಿ ಸೂಫೀ ಸಂತ ಹಜರತ್ ಮೊಫೈರಾಬಿನ್ ಶುಐಬಾ ಎಂಬುವವರು ಕೇರಳ ರಾಜ್ಯದಲ್ಲಿ ಪ್ರಚಾರ ಮಾಡುತ್ತಾ, ಕರ್ನಾಟಕ ಪ್ರಾಂತ್ಯದತ್ತ ಸಾಗಿ ಬಂದರೆಂದು ತಿಳಿದುಬರುತ್ತದೆ. ಅರಬ್ ಪ್ರದೇಶಗಳ ಪ್ರಮುಖ ನಗರಗಳಾದ ಮದೀನಾ ಮತ್ತು ಬಾಗ್ದಾದ್ ನಗರಗಳಿಂದ ಬಂದು ಕರ್ನಾಟಕದ ಮಂಗಳೂರಿನ ಉಲ್ಲಾಳದಲ್ಲಿ ಹಜರತ್ ಶರೀಫುಲ್ ಮದನಿಯವರು ಇಸ್ಲಾಂ ಧರ್ಮಪ್ರಚಾರವನ್ನು ಮಾಡುತ್ತಾ ಅಲ್ಲಿಯೇ ನೆಲೆಸಿದರು. ಇವರ ನಂತರ ಬಾಗ್ದಾದಿನಿಂದ ಕರ್ನಾಟಕದ ಲಕ್ಷ್ಮೇಶ್ವರಕ್ಕೆ ಬಂದು ನೆಲೆಸಿದ ಹಜರತ್ ಸುಲೇಮಾನ್ ಬಾದ್‌ಷಾಹ್ ಖಾದ್ರಿಯವರು ಪ್ರಸಿದ್ಧರು.

ಭಾರತಕ್ಕೆ ಕಾಲಿಟ್ಟ ಸೂಫಿ ಸಂತರುಗಳ ಆಗಮನ ಎರಡು ಕಡೆಗಳಿಂದ ಆಗಿದೆಯೆಂದು ತಿಳಿದುಬರುತ್ತದೆ. ಭಾರತದ ಉತ್ತರಭಾಗದಿಂದ ಭೂಮಾರ್ಗವಾಗಿ ಆಫ್‌ಘಾನಿಸ್ತಾನ, ಪರ್ಶಿಯಾ ಕಡೆಗಳಿಂದ ಕ್ರಿ.ಶ. ೧೧ ನೆಯ ಶತಮಾನದಲ್ಲಿ ಬಂದವರು ಕಾಶ್ಮೀರ, ದೆಹಲಿ, ಪಂಜಾಬ್ ಪ್ರಾಂತಗಳಲ್ಲಿ ನೆಲಸಲಾರಂಭಿಸಿದರು. ಆಫ್‌ಘಾನಿಸ್ತಾನದ 'ಚಿಶ್ತ್' ಎಂಬ ಹಳ್ಳಿಯ ಕಡೆಯಿಂದ ಬಂದ ಚಿಶ್ತಿ ಸಂಪ್ರದಾಯದವರು ಭಾರತದಲ್ಲಿ ಹೆಚ್ಚು ಜನಪ್ರಿಯರಾದರು. ಬಾಗ್ದಾದಿನಿಂದ ಬಂದ 'ಖಾದ್ರಿ'

ಸಂಪ್ರದಾಯದ ಸೂಫೀ ಸಂತರೂ ಚಿಶ್ತಿ ಸಂಪ್ರದಾಯದವರಷ್ಟೇ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕಡಲಮಾರ್ಗವಾಗಿ ಬಂದ ಸೂಫೀ ಸಂತರುಗಳ ಕೈಯಲ್ಲಿ ಖಡ್ಗವಿರಲಿಲ್ಲ. ಇವರು ಶಾಂತಿಪ್ರಿಯರು. ಪ್ರೇಮ–ಸೋದರತ್ವಗಳೇ ಇವರ ಆಯುಧಗಳಾಗಿದ್ದುವು. ಶಾಂತಿಪ್ರಿಯರಾಗಿದ್ದ ಇವರು ಭಾರತದ ದಕ್ಷಿಣಭಾಗದಲ್ಲಿ ಇಸ್ಲಾಂ ಧರ್ಮವನ್ನು ಸ್ಥಾಪಿಸಿದರು.

ಕ್ರಿ. ಶ. ೧೧ ನೆಯ ಶತಮಾನದಲ್ಲಿ ಉತ್ತರದ ಕಡೆಯಿಂದ ಬಂದ ಸೂಫೀ ಸಂತರುಗಳಲ್ಲಿ ಪ್ರಸಿದ್ಧರಾದ ಹಜರತ್ ಮೊಯಿನುದ್ದೀನ್ ಚಿಶ್ತಿಯ ಸಂಗಾತಿಯಾಗಿದ್ದ ಹಾಜಿ ರೂಮಿ ಬಾಬಾ, ಕರ್ನಾಟಕದ ಉತ್ತರದಲ್ಲಿನ ಬಿಜಾಪುರಕ್ಕೆ ಬಂದು ನೆಲೆಸಿದರು. ಈ ಸಂತರಾರೂ ಸಂಘರ್ಷದ ಮಾರ್ಗವನ್ನು ಹಿಡಿಯಲಿಲ್ಲ.




## ಸೂಫೀ ಪರಂಪರೆಗಳು

ಭಾರತದಲ್ಲಿ ಹೆಚ್ಚು ಪ್ರಸಿದ್ಧವಾಗಿರುವ ಸೂಫಿ ಪರಂಪರೆಗಳಲ್ಲಿ **“ಚಾರ್ ಪೀರ್ – ಚೌದಹ್ ಖಾನುವಾವೆ”** ಎಂಬ ಒಂದು ಉಕ್ತಿ ಪ್ರಚಲಿತವಿದೆ. ಇದರ ಪ್ರಕಾರ **ಖಾದರಿಯಾ, ಚಿಶ್ತಿಯಾ, ನಕ್ಷ್ ಬಂದಿಯಾ** ಮತ್ತು **ಖಲಂದರಿಯಾ** ಎಂಬ ನಾಲ್ಕು ಮೂಲ ಗುರು ಪ್ರಧಾನ ಪಂಗಡಗಳಲ್ಲದೆ, ಪ್ರಮುಖವಾಗಿ ಹದಿನಾಲ್ಕು ಶಾಖೆಗಳ ಪರಂಪರೆಗಳೂ ಕಂಡುಬರುತ್ತವೆ. ಈ ಹದಿನಾಲ್ಕು ಫಿರ್ಖಾಗಳಲ್ಲಿ ಹತ್ತು ಫಿರ್ಖಾಗಳ ಮೂಲಪುರುಷರ ಹೆಸರುಗಳೂ, ಅವರ ತತ್ತ್ವವಿಚಾರಗಳೂ ನಮಗೆ ದೊರೆತಿವೆ.

ಈ ಹತ್ತು ಫಿರ್ಖಾಗಳನ್ನು (ಪಂಗಡ) ಶುದ್ಧ ಸೂಫೀ ಫಿರ್ಖಾಗಳೆಂದು ಕರೆಯುತ್ತಾರೆ. ಉಳಿದ ನಾಲ್ಕು ಪಂಗಡಗಳು ಮಿಶ್ರಪಂಗಡಗಳಾಗಿದ್ದು, ಅವುಗಳ ಪ್ರಮುಖರ ಹೆಸರುಗಳು ಸಿಗುವುದಿಲ್ಲ. ಇವರನ್ನು “ಹುಲೂಲಿಯಾ” ಫಿರ್ಖಾಗಳೆಂದು ಕರೆಯುವರು. ಇವರನ್ನು ಅಲೆಮಾರಿ ಖಲಂದರರೆಂದು ಕರೆಯುತ್ತಾರೆ. ಅಲ್ಲಾಹ್‌ನೊಂದಿಗೆ ಮಾಧುರ್ಯಭಾವದಿಂದ ಇದ್ದು, ಪ್ರೇಮೋಪಾಸನೆಯೇ ಇವರ ಮುಖ್ಯ ಗುರಿಯಾಗಿದೆ. ಈ ಪಂಗಡಗಳ ಸೂಫೀ ಸಂತರ ಮೇಲೆ ಭಗವಾನ್ ಬುದ್ಧನ ನಿರ್ವಾಣದ ಪ್ರಭಾವವಿದೆಯೆಂದು ಕೆಲವರು ಹೇಳುತ್ತಾರೆ.

## ಸೂಫೀ ಸಂತರ ಸ್ವಭಾವ

ಕರ್ನಾಟಕದಲ್ಲಿ ಕಾಲಕಾಲಕ್ಕೆ ಬಂದು ನೆಲೆಸಿದ ಸೂಫೀ ಸಂತರ ಸುಮಾರು ೩೭೪ ದರ್ಗಾಗಳಿವೆ ಎಂದು ತಿಳಿದುಬರುತ್ತವೆ. ಇವರೆಲ್ಲರಲ್ಲಿ ಖಾದ್ರಿಯಾ ಮತ್ತು ಚಿಶ್ತಿಯಾ ಪಂಗಡಗಳ ಗುರು–ಶಿಷ್ಯ ಪರಂಪರೆಗಳೇ ಹೆಚ್ಚು. ಕರ್ನಾಟಕದ ಸೂಫಿಗಳೆಂದರೆ ಈಗಣ ಮಹಾರಾಷ್ಟ್ರ ಆಂಧ್ರಗಳಿಗೆ ಸೇರಿದ ಸೊಲ್ಲಾಪುರ, ಅಕ್ಕಲಕೋಟೆ, ಕೌತಾಳ, ಹೊನ್ನೂರು, ಎಳ್ಬಾರತಿ, ಹೊಳಲಗುಂದಿ ಮುಂತಾದ ಊರುಗಳಲ್ಲಿನ ದರ್ಗಾಗಳಲ್ಲಿ ನೆಲೆಸಿರುವ ಪೀರ್ (ಗುರು)ಗಳೂ ಸೇರುತ್ತಾರೆ. ದಖನ್ನಿನ ಗುಲ್ಬರ್ಗಾದ ಪ್ರಸಿದ್ಧ ಹಜರತ್ ಬಂದೇನವಾಜ್‌ರವರೂ ದೆಹಲಿಯಿಂದ ಬಂದು ನೆಲೆಸಿದವರು. ಇವರು ಚಿಶ್ತಿ ಸಂಪ್ರದಾಯದವರು; ದೊರೆ ಫಿರೋಜನ ಮಾರ್ಗದರ್ಶಕರಾಗಿದ್ದರು.

ಸೂಫೀಗಳ ಸ್ವಭಾವದ ಬಗ್ಗೆ ಹೇಳುವುದಾದರೆ, ಇವರು ಜಾತ್ಯತೀತರು. ಈ ಸೃಷ್ಟಿಯ ಮಾನವಕುಲವೆಲ್ಲವೂ ಒಂದೇ ಗಂಡು–ಹೆಣ್ಣಿನ ಜೋಡಿಯಿಂದ ಸೃಷ್ಟಿಯಾಗಿದ್ದು ಎಂದು ನಂಬಿದವರು. “ಜನರೇ, ನಾವು ನಿಮ್ಮನ್ನೆಲ್ಲಾ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟುಮಾಡಿದೆವು” ಎಂದು ಖುರಾನಿನಲ್ಲಿ ಹೇಳಿದೆ. ಈ ಮಾತಿನ ಮೇಲೆ ಸೂಫೀ ಸಂತರುಗಳಿಗೆ ಅಪಾರ ನಂಬಿಕೆ. ಅವರು ಯಾರನ್ನೂ ದ್ವೇಷಿಸುವುದಿಲ್ಲ. ಅವರು ಪ್ರೇಮೋಪಾಸಕರಾಗಿರುವುದರಿಂದ, ಎಲ್ಲರಲ್ಲೂ ಪ್ರೀತಿಯನ್ನೇ ತೋರುವವರಾಗಿದ್ದಾರೆ. ಅಂದಂದಿನ ಅವರ ಅವಶ್ಯಕತೆಗಳನ್ನು ಪೂರೈಸಿದರೆ ಸಾಕು. ಸಂಗ್ರಹಬುದ್ಧಿ ಅವರಲ್ಲಿ ಇಲ್ಲ. ಆದಂ–ಹವ್ವಾ (ಅಡಮ್–ಈವ್) ಇವರಿಬ್ಬರಿಂದಾದ ಇಡೀ ಸೃಷ್ಟಿಯ ಜನರೆಲ್ಲರೂ ರಕ್ತಸಂಬಂಧಿಗಳು, ಸೋದರರೆಂದು ಅವರು ಅಭಿಪ್ರಾಯಪಡುತ್ತಾರೆ. ಭಗವಂತನನ್ನು ಇವರು ಆರಾಧಿಸು

ವಲ್ಲಿ 'ಸತಿ–ಪತಿ' ಭಾವವೂ ಉಂಟು. ಇದಕ್ಕೆ ಭಿನ್ನವಾಗಿ, ಇತರೆ ಮಿಶ್ರಸಂಪ್ರದಾಯಗಳ ಜನರು ಅಲ್ಲಾಹ್‌ನನ್ನು, ಆತನ ಜ್ಯೋತಿಯನ್ನು (ನೂರ್) ಸ್ತ್ರೀರೂಪದಲ್ಲಿ ಕಂಡು ಅದರಲ್ಲಿ ಐಕ್ಯವಾಗಲು ಹವಣಿಸುವರು.

ಇಸ್ಲಾಂ ಧರ್ಮವನ್ನು ಇಡೀ ಜಗತ್ತಿನಲ್ಲೆಲ್ಲಾ ಹರಡಿದ ಕೀರ್ತಿ ಸೂಫೀಗಳಿಗೆ ಸಲ್ಲುತ್ತದೆ. ಇವರು ಜಂಗಮ ವೈದ್ಯರು. ಅರಬ್ ದೇಶದಲ್ಲಿ ಇವರನ್ನು "ತಬೀಬ್"ಗಳೆಂದು ಕರೆಯುತ್ತಿದ್ದರು. ತಬೀಬ್ ಎಂದರೆ ವೈದ್ಯ. ಇವರ ವೈದ್ಯಪದ್ಧತಿಯನ್ನು "ತಿಬ್ಬಿ" ಎಂದು ಕರೆಯುತ್ತಾರೆ. ಇವರು ಪ್ರಪಂಚದಲ್ಲೆಲ್ಲಾ ಸಂಚರಿಸುವಾಗ ಕಾಡು–ಮೇಡು, ಬೆಟ್ಟ–ಗುಡ್ಡ, ಗುಹೆ–ಗಹ್ವರಗಳಲ್ಲಿ ಧೈರ್ಯದಿಂದ ವಾಸಮಾಡಿ, ಅಲ್ಲಿ ಲಭ್ಯವಾಗುತ್ತಿದ್ದ ಗಿಡ–ಮೂಲಿಕೆ, ಗೆಡ್ಡೆ–ಗೆಣಸು, ಸೊಪ್ಪುಗಳ ಗುಣಧರ್ಮಗಳನ್ನು ಅಧ್ಯಯನ ಮಾಡಿ, ಪ್ರಯೋಗಗಳನ್ನು ನಡೆಸಿ, ಔಷಧಗಳನ್ನು ತಯಾರಿಸಿಕೊಂಡು ಜನಸಾಮಾನ್ಯರಲ್ಲಿ ಬೆರೆತು–ಸಂಪರ್ಕಿಸಿ, ಅವರ ರೋಗ–ರುಜಿನಗಳಿಗೆ ಪರಿಹಾರ ನೀಡುತ್ತ, ಪ್ರೇಮದಿಂದ ವರ್ತಿಸಿ ಗುಣಪಡಿಸುತ್ತಿದ್ದರು. ಇಂತಹ ವರ್ತನೆಗಳಿಂದ ಸೂಫೀ ಸಂತರು ಗಳತ್ತ ಜನರು ಆಕರ್ಷಿತರಾಗುತ್ತಿದ್ದರು. ಜನಸಾಮಾನ್ಯರ ಪಾಲಿಗೆ ಈ ಸೂಫೀಗಳೇ ದೇವರಾಗಿದ್ದರು.

### ಸೂಫೀಗಳ ದೈವದರ್ಶನ

ಸೂಫೀ ಸಂತರು ದ್ವೈತ ಮತ್ತು ಅದ್ವೈತ ಸಿದ್ಧಾಂತಗಳೆರಡ ರಲ್ಲೂ ವಿಶ್ವಾಸವನ್ನಿಟ್ಟವರು. ಇಸ್ಲಾಂ ಧರ್ಮವು ಶುದ್ಧದ್ವೈತ ಸಿದ್ಧಾಂತದೊಂದಿಗೆ **ಷರೀಯತ್** ವಾದದ ದೃಢವಿಶ್ವಾಸಿಯಾದರೆ, ಸೂಫಿದರ್ಶನವು **ಮಾರಿಫತ್** ವಾದದಲ್ಲಿ ಅಪಾರ ನಂಬಿಕೆ ಉಳ್ಳದ್ದಾಗಿದೆ. ಸೂಫಿಗಳು ತಮ್ಮ ಜೀವನವನ್ನು ಸಂಪೂರ್ಣ ತ್ಯಾಗ ಮಾಡಿ ಭಗವದ್ಧ್ಯಾನವನ್ನು ಮಾಡುತ್ತಾ, ಜೀವಾತ್ಮನನ್ನು ಪರಮಾತ್ಮನಲ್ಲಿ ಲೀನಗೊಳಿಸಲು, ಅದಕ್ಕೆ ಸಂಬಂಧಿಸಿದ "ಮುರಾಖಿಬ" (ಯೋಗ) ಸಾಧನೆಯ ಮಾರ್ಗವನ್ನು ಹಿಡಿದು ನಡೆಯುವ ಸಾಧಕರು. ಇವರಿಗೆ ಷರೀಯತ್‌ವಾದಿಗಳು ಇಷ್ಟಪಡುವ ಸ್ವರ್ಗದ ಲಾಲಸೆ ಇರುವುದಿಲ್ಲ. ಭಗವಂತನ 'ನೂರ್' ನಿಂದ ಸೃಷ್ಟಿಯಾಗಿರುವಾಗ, ಆತನ 'ನೂರ್'ನಲ್ಲಿಯೇ ಬೆರೆಯುವ ಮತ್ತು ಬೆರೆತು ಅದೇ ಆಗುವ ಅತೀವ ಆಸೆ ಇವರದು. ಇವರು 'ಅಂಶಾಂಶಿಸಂಭೂತವಾದ' ದಲ್ಲಿ ನಂಬಿಕೆ ಇಡುತ್ತಾರೆ. ಅಲ್ಲಾಹ್‌ನು **'ಮಹಾ ಅಂಶಿ'** ಯಾಗಿದ್ದರೆ ತಾವೆಲ್ಲರೂ ಅವನ ಅಲ್ಪ ಅಂಶಗಳೆಂದು ಅವರು ತಿಳಿದಿದ್ದಾರೆ. ಆ ಮಹತ್ ಶಕ್ತಿಯಲ್ಲಿ ಐಕ್ಯವನ್ನು ಹೊಂದಲು ಯಾವಾಗಲೂ ಕಾತರರಾಗಿದ್ದಾರೆ. ಅವರ ಐಕ್ಯತ್ವದ ಸ್ಥಿತಿಯ ವಿವರವನ್ನು ಈ ವಚನದಲ್ಲಿ ನೋಡಬಹುದು –

**ಅಗರ್ ಖುದಾ ಕೋ ಖುದಾ ಕಹೂಂ ತೋ**
**ಮಹಮ್ಮದ್ ಕೋ ಕ್ಯಾ ಕಹೂಂ;**
**ಹೈ ದೋನೋಂಕಾ ನೂರ್ ಏಕ್ ತೋ**
**ಮಹಮ್ಮದ್ ಕೊ ಕ್ಯಾ ಕಹೂಂ?**

ಅಂದರೆ, ಹಜರತ್ ಮಹಮ್ಮದರ ಹಣೆಯಲ್ಲಿ ಅಲ್ಲಾಹ್‌ನ ಜ್ಯೋತಿ (ನೂರ್) ಯಾವಾಗಲೂ ಬೆಳಗುತ್ತಿತ್ತು ಎಂಬ ನಂಬಿಕೆ ಷರೀಯತ್‌ವಾದಿಗಳಲ್ಲೂ ಇದೆ. ಅಂದ ಮೇಲೆ ಮಾನವರೆಲ್ಲರೂ ಆ 'ನೂರ್'ನಿಂದಲೇ ಆಗಿರುವರೆಂಬುದರ ಮೇಲೆ ವಿಶ್ವಾಸವಿದ್ದಾಗ, ನಾವು ಅವನಲ್ಲಿಯೇ ಬೆರೆತು ಅವನೇ ಏಕೆ ಆಗಬಾರದು? ಹೀಗೆ ಸೂಫೀಗಳು ವಾದಿಸುತ್ತಾರೆ. ಮೇಲಿನ ವಚನದ ಅರ್ಥವೂ ಬಹಳ ಚೆನ್ನಾಗಿದೆ: "ಒಂದು ವೇಳೆ ದೇವರನ್ನು ಭಗವಂತನೆಂದು ಕರೆದರೆ, ಹಜರತ್ ಮಹಮ್ಮದರನ್ನು ಏನೆಂದು ತಾನೇ ನಾನು ಕರೆಯಲಿ? ಇಬ್ಬರೂ ಜ್ಯೋತಿಸ್ವರೂಪಿಗಳೇ ಆಗಿರುವಾಗ, ಮಹಮ್ಮದರನ್ನೇಕೆ ಭಗವಂತನೆಂದು ಕರೆಯಬಾರದು?" ಇಂತಹ ಪ್ರಶ್ನಾರ್ಥಕ ವಚನದಲ್ಲಿ ಅದ್ಭುತವಾದ ಅರ್ಥವು ಅಡಗಿದೆ.

> **ಕಬ್ಬಿಣವು ಉರಿಯನ್ನುಂಡ ಬಳಿಕ ಕೆಂಪಾಗಿ ಕಂಡರೂ, ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ; ಷರಾಬು (ಮದ್ಯ) ನೀರಿನಲ್ಲಿ ಬೆರೆತರೂ ಷರಾಬಿನ ಅಂಶ ಗೋಚರಿಸುವುದಿಲ್ಲ, ಉರಿಬಿಸಿಲಿನಲ್ಲಿ ಹಣತೆಯ ಬೆಳಕು ಬೆರೆತಿದ್ದರೂ, ಹಣತೆಯ ಜ್ಯೋತಿ ತನ್ನ ಸುಡುವ ಗುಣವನ್ನು ಉಳಿಸಿಕೊಂಡಿರುತ್ತದೆ. ಇವು ಸೂಫೀಗಳು ಮೋಕ್ಷಕ್ಕೆ ನೀಡುವ ನಿದರ್ಶನಗಳು. ಅಮೋಘವೂ ಅಪೂರ್ವವೂ ಆದ ಈ ಬಗೆಯ ಐಕ್ಯಸ್ಥಿತಿಯ ವಿವರಣೆ ಇತರ ಕಡೆ ದೊರಕುವುದು ವಿರಳ.**

ಹೀಗೆ ಸೂಫೀಗಳು ತಮ್ಮ ಉದಾರ ಮಾನವೀಯ ಮೌಲ್ಯಗಳಿಂದಾಗಿ ಜಗತ್ತಿನಲ್ಲಿ ತಮ್ಮದೇ ಆದ ಪ್ರಮುಖ ಸ್ಥಾನ ವನ್ನು ಉಳಿಸಿಕೊಂಡಿದ್ದಾರೆ. ಜಗತ್ತಿನ ಎಲ್ಲ ಧರ್ಮಗಳಲ್ಲೂ ಮಾನವೀಯ ಮೌಲ್ಯಗಳು ತುಂಬಿ ತುಳುಕಾಡುತ್ತಿದ್ದರೂ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ನಮ್ಮ ಸ್ವಂತ ಧರ್ಮದ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ನೆಪ ಒಡ್ಡಿ, ಒಂದು ಹುಚ್ಚು ಹೊಳೆಯಲ್ಲಿ ಹೊರಟ ನಾವು, ಧರ್ಮ–ಧರ್ಮಗಳ ಮಧ್ಯೆ ಬಲವಾದ ಅರ್ಥಹೀನ ಗೋಡೆಗಳನ್ನು ಹಿಂದೆಂದಿಗಿಂತಲೂ ಹೆಚ್ಚು ಬಲಪಡಿಸಲು ಹೊರಟಿದ್ದೇವೆ. ಇದರಿಂದಾಗಿ ಮಾನವ ಕುಲವನ್ನೇ ನಾಶಮಾಡುವತ್ತ ನಾವು ಸಾಗಿದ್ದೇವೆಯೋ ಎಂಬ ಭಯವು ಇಂದು ನಮ್ಮನ್ನು ಕಾಡುತ್ತಿದೆ. ನಾವೆಲ್ಲರೂ "ಒಂದೇ ತತ್ತ್ವದಿಂದ ಸೃಷ್ಟಿಗೊಂಡ ಸೋದರರು" ಎಂಬುದನ್ನು ನಾವು ಒಡನೆಯೇ ಅರಿಯಬೇಕಾಗಿದೆ. ಇಲ್ಲದಿದ್ದರೆ ಸರ್ವನಾಶ ಖಂಡಿತ. ಇಂಥ ಸಂದರ್ಭದಲ್ಲಿ ಸೂಫೀಗಳ ಆದರ್ಶ, ತತ್ತ್ವ ಮತ್ತು ಜೀವನ ಅನುಕರಣೀಯ.

### *ಆಧಾರ ಗ್ರಂಥಗಳು:*


೧. **ಸೂಫೀಪಥ ಮತ್ತು ಶರಣಪಥಗಳ ತೌಲನಿಕ ಅಧ್ಯಯನ**
*–ಡಾ. ಅಬ್ದುಲ್ ಹಮೀದ್*

೨. **ಸಂಸ್ಕೃತಿ ಕೆ ಚಾರ್ ಅಧ್ಯಾಯ್** (ಹಿಂದಿ)
*– ಡಾ. ರಾಂಧಾರಿ ಸಿಂಹ ದಿನಕರ್*

೩. **ಕರ್ನಾಟಕದ ಸೂಫೀಗಳು** – *ಡಾ. ರಹಮತ್ ತರೀಕೆರೆ*

೪. **ಖುರಾನ್ ಗ್ರಂಥ** – *ಅಲ್ ಹುಜರಾತ್ –೧೨ನೇ ಶ್ಲೋಕ*